ಕನ್ನಡ ಕಾಯಕ ಮಾಲೆ - ೪೭

ಕರ್ನಾಟಕ ಸರ್ಕಾರ
ಕನ್ನಡ ಅಭಿವೃದ್ಧಿ ಪ್ರಾಧಿಕಾರ

# ಪ್ರಬಂಧಮಂಜೂಷಾ

## ಅಂತಾರಾಷ್ಟ್ರೀಯ ಅಂತರ್ಜಾಲ ಸರಣಿ ವಿಚಾರಗೋಷ್ಠಿಗಳಲ್ಲಿ ಮಂಡಿತವಾದ ಲೇಖನಗಳ ಸಂಗ್ರಹ


ಸಂಪಾದಕರು

**ಡಾ. ಮಲ್ಲನಗೌಡ. ಎಸ್**

ಸಹ ಸಂಪಾದಕರು

**ವಿದ್ವಾನ್ ಆರ್. ಜಗನ್ನಾಥ ಪೂಜಾರ್**

**ಡಾ. ತೇಜಸ್ವಿನಿ ಬಿದರಿ**


ಕನ್ನಡ ಕಾಯಕ ವರ್ಷ

"PRABANDHAMANJUSHA"-The Collection of Articles Presented in the International Webinar Series, Editor: Dr. Mallanagowda.S., Co Editors: Vidwan R. Jagannatha Pujar and Dr. Thejasvini Bidari, Published by: Karnataka Samskrit University Chamarajpet, Bengaluru 560018.

© Karnataka Samskrit University

| | | |
|---|---|---|
| First Impression | : | 2022 |
| Copies | : | 500 |
| Pages | : | xxviii + 228 = 256 |
| Used Paper | : | 80 GSM N.S. Maplitho |
| Price Rs | : | 180/- |
| ISBN No. | : | 978-81-950693-0-9 |

**ಈ ಕೃತಿಯು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಧನಸಹಾಯದಿಂದ ಪ್ರಕಟವಾಗಿದೆ.**

"ಪ್ರಬಂಧಮಂಜೂಷಾ" ಅಂತಾರಾಷ್ಟ್ರೀಯ ಅಂತರ್ಜಾಲ ಸರಣಿ ವಿಚಾರಗೋಷ್ಠಿಗಳಲ್ಲಿ ಮಂಡಿತವಾದ ಲೇಖನಗಳ ಸಂಗ್ರಹ. ಸಂಪಾದಕರು: ಡಾ. ಮಲ್ಲನಗೌಡ ಎಸ್., ಸಹ ಸಂಪಾದಕರು: ಡಾ. ವಿದ್ವಾನ್ ಆರ್ ಜಗನ್ನಾಥ ಪೂಜಾರ್ ಮತ್ತು ಡಾ. ತೇಜಸ್ವಿನಿ ಬಿದರಿ. ಪ್ರಕಾಶಕರು: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು ೫೬೦೦೧೮.

© ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

| | | |
|---|---|---|
| ಮೊದಲ ಮುದ್ರಣ | : | ೨೦೨೨ |
| ಪ್ರತಿಗಳು | : | ೫೦೦ |
| ಪುಟಗಳು | : | xxviii + ೨೨೮ = ೨೫೬ |
| ಬಳಸಿದ ಕಾಗದ | : | ೮೦ ಜಿ.ಎಸ್.ಎಮ್.ಎನ್.ಎಸ್. ಮ್ಯಾಪ್ಲಿಥೋ |
| ಬೆಲೆ ರೂ | : | ೧೮೦/- |
| ಐಎಸ್‌ಬಿಎನ್ ಸಂ. | : | ೯೭೮-೮೧-೯೫೦೬೯೩-೦-೯ |
| ಅಕ್ಷರ ವಿನ್ಯಾಸ | : | ಸಿದ್ವಿನ್ ಗ್ಲೋಬಲ್ ಸಲ್ಯೂಷನ್ಸ್, ಬೆಂಗಳೂರು-೧೮. |
| ಮುಖಪುಟ | : | ವೈಟ್ ಸ್ಟೋನ್ |
| ಮುದ್ರಣ | : | ಪವನ್ ಪ್ರಿಂಟರ್ಸ್ ಚಾಮರಾಜಪೇಟೆ ಬೆಂಗಳೂರು-೧೮ |

೫. ಸಂಸ್ಕೃತ ಭಾಷೆ ಮತ್ತು ಆಯುರ್ವೇದ

(ಅ) ಆಯುರ್ವೇದ ಕ್ಷೇತ್ರಕ್ಕೆ ಸಂಸ್ಕೃತ ಭಾಷೆಯ ಕೊಡುಗೆ ೯೪–೯೭

– ವಿದ್ವಾನ್ ಚಂದ್ರಶೇಖರಯ್ಯ ಹಿರೇಮಠ

(ಆ) ಸಂಸ್ಕೃತ ವಾಙ್ಮಯದಲ್ಲಿ ಆರೋಗ್ಯ ಸೂತ್ರಗಳು (ಆಯುರ್ವೇದಶಾಸ್ತ್ರ)

– ಡಾ. ಶಿವಕುಮಾರ್ ಟಿ ೯೮–೧೦೭

೬. ಸಂಸ್ಕೃತ ಶಾಸನ ಸಾಹಿತ್ಯದಲ್ಲಿ ಭಾರತೀಯ ಇತಿಹಾಸ

(ಅ) ಸಂಸ್ಕೃತ ಮತ್ತು ಭಾರತೀಯ ಇತಿಹಾಸ ೧೦೮–೧೧೨

– ಡಾ. ಸಂತೋಷ ಸು. ಹಾನಗಲ್ಲ

೭. ಸಂಸ್ಕೃತ ಮತ್ತು ಯೋಗ

(ಅ) ಹಠಯೋಗದಿಂದ ರಾಜಯೋಗ : ಒಂದು ವಿಹಂಗಮ ನೋಟ

– ಡಾ. ಚಂದ್ರಮೌಳಿ ಶಿ. ನಾಯ್ಕರ ೧೧೩–೧೧೮

(ಆ) ವೇದಗಳು ಮತ್ತು ಯೋಗದ ಸಂಬಧ ೧೧೯–೧೨೧

– ಡಾ. ಋಷಿದೇವ ಭಾರ್ಗವ. ಎನ್

೮. ಸಂಸ್ಕೃತ ಮತ್ತು ಜ್ಯೋತಿಷ

(ಅ) ಸಿದ್ಧಾಂತ ಜ್ಯೋತಿಷ ೧೨೨–೧೩೨

– ಡಾ. ಡಿ. ಶಿವಪ್ರಸಾದ ತಂತ್ರಿ

(ಆ) ಫಲಿತ ಜ್ಯೋತಿಷ ೧೩೩–೧೪೧

– ಡಾ. ಭಾಸ್ಕರ ಭಟ್ಟ ಜೋಶಿ

೯. ಸಂಸ್ಕೃತ ಮತ್ತು ಮಾಧ್ಯಮ

(ಅ) ದೃಶ್ಯ ಮಾಧ್ಯಮದಲ್ಲಿ ಸಂಸ್ಕೃತದ ಯೋಗದಾನ ೧೪೨–೧೪೫

– ಡಾ. ಮಾದನೂರು ಪವಮಾನಾಚಾರ್

(ಆ) ಪತ್ರಿಕೋದ್ಯಮ ಮತ್ತು ಸಂಸ್ಕೃತ ಭಾಷೆ ೧೪೬–೧೫೩

– ಡಾ. ಗೋಪಾಲಕೃಷ್ಣ ಹೆಗಡೆ

# (ಅ) ವೇದಗಳು ಮತ್ತು ಯೋಗದ ಸಂಬಂಧ

✍ ಡಾ. ಋಷಿದೇವ ಭಾರ್ಗವ ಎನ್

ವೇದ ಮತ್ತು ಯೋಗದ ಸಂಬಂಧ ಜನ್ಯ ಜನಕಭಾವದ ಸಂಬಂಧವಾಗಿದೆ. ಎಲ್ಲಾ ಸತ್ಯವಿದ್ಯೆ ಮತ್ತು ಪದಾರ್ಥವಿದ್ಯೆಗಳಿಗೆ ವೇದವೇ ಮೂಲವಾದಾಗ ಯೋಗಕ್ಕೆ ವೇದವೇ ಮೂಲ ಎಂಬುದು ಸ್ವತಃ ಸಿದ್ಧವಾದ ಅಂಶ.

ಯೋಗದ **ತಸ್ಯವಾಚಕಃ ಪ್ರಣವಃ** ಎಂಬುದರಲ್ಲಿ ಓಂಕಾರವು ಭಗವಂತನ ಹೆಸರು ಎಂಬುದು ಉಲ್ಲೇಖವಾಗಿದೆ. ಯಾವುದೇ ಮಂತ್ರದರ ಆದಿಯಲ್ಲಿ ಓಂಕಾರದ ಉಚ್ಚಾರಣೆ ಶಾಸ್ತ್ರ ಸಮ್ಮತವಾದದು.

ಪಾಣಿನೀಯ ಸೂತ್ರವಾದ ಪ್ರಣವಷ್ಟೇ ಸೂತ್ರವು ಮಂತ್ರದ ಆರಂಭದಲ್ಲಿ ಉಚ್ಚರಿಸಲ್ಪಡುವು ಪ್ರಣವತ್ರ ಪ್ಲುತ ಅಂದರೆ ಮೂರು ಮಾತ್ರೆಗಳುಳ್ಳದ್ದಾಗುತ್ತದೆ. ಎಂದು ಹೇಳುತ್ತದೆ ಆದ್ದರಿಂದ ವೇದಗಳ ಅನುಗುಣವಾಗಿಯೇ ಯೋಗ ಸೂತ್ರಗಳು ಇರುವುವು.

ಕೇವಲ ಶಬ್ದದ ಜಪ ಅಥವಾ ಪಠಣ ಮಾಡಿದರೆ ಯಾವುದೇ ಫಲ ವಿರುವುದಿಲ್ಲ ಎಂದು ಸ್ವಯಂ ವೇದವು **"ಯಸ್ತನ್ನ ವೇದ ಕಿಂ ರಿಚಃ ಕರಿಷ್ಯತಿ"** ಎಂಬುದನ್ನು ಹೇಳಿರುವಂತೆ ಯೋಗಸೂತ್ರವೂ ಕೂಡಾ **"ತಜ್ಜಪಸ್ತದರ್ಥ ಭಾವನಮ್"** ಎಂಬುದಾಗಿ ಹೇಳುತ್ತದೆ. ಅಂದರೆ ಅರ್ಥದ ಭಾವನೆಯಿಂದ ಪಠಣ ಅಥವಾ ಜಪವನ್ನು ಮಾಡುವುದು ಹೀಗೆ ಅನೇಕ ವಿಷಯಗಳಲ್ಲಿ ಸಾರೂಪ್ಯಗಳಿದ್ದು ವೇದಗಳ ಸರಿಯಾದ ಅರ್ಥವನ್ನು ತಿಳಿಯಲು ಉಪಾಂಗವಾದ ಯೋಗದರ್ಶನವೂ ಸಹಕಾರಿಯಾಗಿದೆ ಎಂಬುದನ್ನು ಈ ಮೂಲಕ ತಿಳಿಯಬಹುದಾಗಿದೆ.

ಯೋಗ ಸೂತ್ರವಾದ **ವೃತ್ತಯಃ ಪಂಚತಯ್ಯಃ ಕ್ಲಿಷ್ಟಾಕ್ಲಿಷ್ಟಾಃ** ಎಂಬುವ ಸೂತ್ರದಲ್ಲಿ ಯೋಗಸೂತ್ರಗಳ ವ್ಯಾಖ್ಯಾನಕಾರರು ವಿಜ್ಞಾನಭಿಕ್ಷುವನ್ನೊಳಗೊಂಡಂತೆ ಅಕ್ಲಿಷ್ಟ ವೃತ್ತಿಗಳು ವೇದಾದಿ ಸತ್ ಶಾಸ್ತ್ರಗಳಿಂದ ವುಂಟಾಗುತ್ತದೆಂದೂ ಕ್ಲಿಷ್ಟ ವೃತ್ತಿಗಳು ಅಜ್ಞಾನದಿಂದ ಮತ್ತು ದುಃಖಕೊಡುವ ಮನಸ್ಸಿನ ಕಾಮನೆಗಳಿಂದ ಜೀವಾತ್ಮನಿಗೆ ಇಂದ್ರಿಯ ಲೋಲುಪತೆಗೆ ತಳ್ಳಿ ಅವನ ಸರ್ವತಃ ಪತನ ಮಾಡುವುದಕ್ಕೆ ಕಾರಣವಾಗುತ್ತವೆ. ಆದ್ದರಿಂದ ವೇದ ಉಪನಿಷತ್ತಗಳು ಮುಂತಾದ ವೇದಗಳಿಗೆ ಅನಾಕೂಲವಾದ ಆರ್ಷೇಯ ಗ್ರಂಥಗಳಿಂದ ಅಕ್ಲಿಷ್ಟ ಅಂದರೆ ಕ್ಲಿಷ್ಟ ವೃತ್ತಿಗಳನ್ನು ದೂರೀಕರಿಸಲು ಇರುವ ವೃತ್ತಿಗಳನ್ನು ಪರಂಪರೆಯ

ಜ್ಞಾನಗಳಿಂದ ಸತ್ಪುರುಷರ ಆಚರಣೆಗಳಿಂದ ಅಕ್ಲಿಷ್ಟ ವೃತ್ತಿಗಳು ನಮ್ಮಲ್ಲಿ ಪ್ರಬಲವಾಗಿ ದುಃಖದಾಯಿಕಗಳಾದ ಕ್ಲಿಷ್ಟ ವೃತ್ತಿಗಳು ಬಲ ಕ್ಷೀಣಿಸಿ ಮಾನಸಿಕ ಆಧ್ಯಾತ್ಮಿಕ ಸಾಮಾಜಿಕ ಉನ್ನತಿ ಕಾರಣವಾಗುವುದು.

ಮತ್ತೊಂದು ಯೋಗ ಸೂತ್ರವಾದ **"ಪ್ರತ್ಯಕ್ಷಾನುಮಾನಾಗಮಾಃ ಪ್ರಮಾಣಾನಿ"** ಎಂಬ ಸೂತ್ರದಲ್ಲಿ ಪತಂಜಲಿ ಮುನಿಯ ಆಗಮ ಪ್ರಮಾಣವೆಂದರೆ ವೇದಾದಿ ಸತ್‌ಶಾಸ್ತ್ರಗಳು ಎಂಬುದನ್ನು ಉಲ್ಲೇಖಿಸಿದ್ದಾರೆ. ವ್ಯಾಖ್ಯಾನಕಾರರೂ ಕೂಡಾ ಶಬ್ದ ಪ್ರಮಾಣವನ್ನು ಒಪ್ಪುವ ಆಸ್ತಿಕ ದರ್ಶನವಾಗಿರುವುದರಿಂದ ಜೈನ ಬೌದ್ಧಾದಿ ನಾಸ್ತಿಕಶಾಸ್ತ್ರಗಳು ವೇದಗಳ ಪ್ರಾಮಾಣ್ಯವನ್ನು ಒಪ್ಪದಿರುವುದರಿಂದ ವೇದಗಳು ಪರಮ ಪ್ರಾಮಾಣ್ಯವನ್ನೇ ಅಂಗಿಕರಿಸುತ್ತದೆ ಎಂಬುದು ಸುಸ್ಪಷ್ಟವಾಗಿದೆ.

**'ಸರ್ವೇಷಾಂ ತು ಸ ನಾಮಾನಿ ಕರ್ಮಾಣಿ ಪೃಥಕ್ ಪುಥಃ ವೇದ ಶಬ್ದೇಭ್ಯ ಏವಾದೌ ಪ್ರಥಕ್ ಸಂಸ್ಥಾಂಶ್ಚ ನಿರ್ಮಮೇ'** ಈ ಮನುವಿನ ಶ್ಲೋಕವು ಎಲ್ಲಾ ಶಬ್ದ ಮತ್ತು ಕ್ರಿಯಾರೂಪವಾಗಿ ಕಾಣುವ ಅಕ್ಷರ ಜಗತ್ತಿಗೆ ವೇದಗಳೇ ಮೂಲ ಎಂಬುದಾಗಿ ಸಿದ್ಧಾಂತಿಸಲು ಯೋಗ ಇದಕ್ಕೇ ಹೊರತಾಗಿಲ್ಲ ಎಂಬುದು ಸ್ವತಃ ಸಿದ್ಧ ಆದರೂ ಈ ವಿಷಯವನ್ನು ತಿಳಿಸಲು ಪ್ರೇರಕವಾದ ಹಾಗೂ ಪ್ರತಿಕ್ರಿಯೆಗೆ ಪ್ರಚೋದಿಸವ ಅಂಶಗಳು ನಮ್ಮ ಮುಂದೆಯೇ ಇವೆ. ಅವು ಯಾವುವೆಂದರೆ ಪಾಶ್ಚಾತ್ಯದಲ್ಲಿ ಯೋಗದ ಸ್ವರೂಪ ಇಂದು ಕೆಲವು ಕಡೆಗಳಲ್ಲಿ ವಿರೂಪವಾಗಿಸಿ ನಮ್ಮ ವೇದ ಸಂಸ್ಕೃತಿಗೆ ಅಪಚಾರವಾಗುವಂತೆ ಮಾಡುತ್ತಿರುವುದು.

ವ್ಯಾಪಾರೀಕರಣದ ಈ ಯುಗದಲ್ಲಿ ಜನರನ್ನು ಆಕರ್ಷಸಿ ಸಲುವಾಗಿ ಮತ್ತು ವ್ಯಾಯಾದ ಜಿಮ್‌ಗಳ ಸ್ಥಾನಗಳಲ್ಲಿ ಯೋಗ ತರಗತಿಗಳು ಹೇರಳವಾಗಿ ಬೆಳೆದು ಕೇವಲ ದೈಹಿಕ ವ್ಯಾಯಾಮವಾಗಿಯೇ ತರಬೇತಿ ಗೊಳಿಸುತ್ತಿರುವ ಮತ್ತು ನಮ್ಮ ಯೋಗ ಸಂಸ್ಕೃತಿಗೆ ಯೋಗದ ನೈಜ ಸ್ವರೂಪಕ್ಕೆ ದಕ್ಕೆ ತರುವಂತಹ ರೀತಿಯಲ್ಲಿ ಯೋಗವನ್ನು ಸೂತ್ರಗಳಿಂದ ಬೇರ್ಪಡಿಸಿ ಸಂಸ್ಕೃತದಿಂದ ಬೇರ್ಪಡಿಸಿ ಆತ್ಮವನೇ ತೆಗೆದ ರೂಪದಲ್ಲಿ ಯೋಗವನ್ನು ಪ್ರಸ್ತುತ ಪಡಿಸುತ್ತಿರುವುದು ಅತ್ಯಂತ ವಿಷಾದನೀಯ ಭಾರತೀಯ ಆಚಾರ್ಯರು ತಮ್ಮ ತಪೋಬಲದಿಂದ ೧೯೫ ಸೂತ್ರಗಳಲ್ಲಿ ಸಕಲ ಯೋಗದ ಜ್ಞಾನವನ್ನು ಬೆಸೆದು ಮಾನವಕುಲಕ್ಕೆ ಕಲ್ಯಾಣವಾಗಲಿ ಎಂಬುದರ ಉದ್ದೇಶವನ್ನು ರುಚಿ ಕೇವಲ ವ್ಯಾಪಾರೀ ಮನೋಭವದಲ್ಲಿ 'ಯೋಗ'ವನ್ನು ಪ್ರಸ್ತುತಪಡಿಸುತ್ತಿವೆ



ಆದ್ದರಿಂದ ಯೋಗದ ಸಂಬಂಧ ವೇದಗಳ ಜೊತೆಯಲ್ಲಿ ಇರುವುದನ್ನು ಸ್ಪಷ್ಟಪಡಿಸಲು ಸಕಾಲವಾಯಿತು.

ಅನೇಕ ಪಾಶ್ಚಾತ್ಯರು ಪತಂಜಲಿಗಳ ಎಲ್ಲಾ ಸೂತ್ರಗಳನ್ನು ಕಂಠಪಾಠ ಮಾಡಿ ಸಂಪೂರ್ಣ ಶಾಖಾಹಾರಿಗಾಗಿ ಭಾರತೀಯ ಸಂಸ್ಕೃತಿಯ ಬಗ್ಗೆ ಅಪಾರ ಗೌರವಗಳನ್ನು ಇರಿಸಿದವರನ್ನು ನಾನು ಕಣ್ಣಾರೆ ಕಂಡಿದ್ದೇನೆ ಹೀಗಾಗಿ ಭಾರತೀಯ ಈ ವಿದ್ಯೆ ನಮ್ಮ ನಿಮ್ಮೆಲ್ಲರ ಆಸ್ತಿಯಾಗಿದೆ ಮಾನವನ ಪರಮ ಪುರುಷಾರ್ಥವಾದ ಮೋಕ್ಷಕ್ಕೆ ದಾರಿಯಾಗಿದೆ. ಇಂತಹ ಜ್ಞಾನವನ್ನು ಅಕ್ಷುಣ್ಣವಾಗಿರಿಸಿ ಅನರ್ಥ ಪರಂಪರೆಗೆ ದಾರಿಯಾಗದಂತೆ ನೋಡಿಕೊಳ್ಳುವುದು ನಮ್ಮ ನಿಮ್ಮೆಲ್ಲರ ಆದ್ಯಕರ್ತವ್ಯವಾಗಿದೆ.

ಸುಮಾರು ೨೦೦೦ ವರ್ಷಗಳ ಪುರಾತನವಾದ ಈ ವಿದ್ಯೆ ಇಂದು ಭಾರತವನ್ನು ಪರಿಚಯಿಸುವ ವಿಧ್ಯೆಯಾಗಿದೆ ಅಂತಾರಾಷ್ಟ್ರೀಯ ಯೋಗ ಆಚಾರಣೆಗೆ ಇಡಿ ವಿಶ್ವವೇ ಭಾರತವನ್ನು ಶ್ಲಾಘಿಸಿದೆ. ಪ್ರೋತ್ಸಾಹಿಸಿದ ಭಾರತದ ಇನ್ನೂ ಅನೇಕ ವಿಸ್ಮಯಕಾರಿ ವಿದ್ಯೆಗಳು ಪ್ರಪಂಚಕ್ಕೆ ಪರಿಚಯಿಸುವುದು ಇದ್ದೇ ಇದೆ. ಆದ್ದರಿಂದ ಈ ಉಲ್ಲೇಖನೇಯ ಶೀರ್ಷಿಕೆಯು ನಾಂದಿಯಾಗಲಿ ಎಂಬುದಾಗಿ ಆಶಿಸುತ್ತೇನೆ.

**ಸಹಾಯಕ ಗ್ರಂಥಗಳ ಸೂಚಿ**

೧. ಋಗ್ವೇದ

೨. ಯೋಗಪ್ರವೇಶ

೩. ಆಸನ ಪ್ರಾಣಾಯಾಮ

೪. ಮುದ್ರಾಬಂಧ

೫. ಹಠಯೋಗ ಪ್ರದೀಪಿಕ